

ಆತ: ಇವರು ಬಹಳ ದೊಡ್ಡ ಲೇಖಕರು ಸಾರ್

ಈತ: ಅದ್ಸರಿ, ಅಷ್ಟೊತ್ತಿಂದ ಏನನ್ನು ಹುಡುಕುತ್ತಿದ್ದಾರೆ?

ಆತ: ಅವರು ತಮ್ಮ ಕಲ್ಪನೆಯ ಕುದುರೆಯನ್ನು ಬಹಳ ದೂರ ಓಡಿಸಿದ್ದಾರಂತೆ. ಕಾಣೆಯಾದ ಕುದುರೆಯನ್ನು ಹುಡುಕುತ್ತಿದ್ದಾರೆ.

★★★

ಬಟ್ಟೆ ಅಂಗಡಿಯಾತ: ಸೀರೆ ನಿಮ್ಮ ಅತ್ತೆಗಾ ಮೇಡಂ?

ಆಕೆ: ಹೌದು, ಅದ್ಹೇಗೆ ಅಷ್ಟು ಸರಿಯಾಗಿ ಹೇಳಿದಿರಿ?

ಬಟ್ಟೆ ಅಂಗಡಿಯಾತ: ಇರುವುದರಲ್ಲೇ ಅಗ್ಗದ ಸೀರೆ ತೋರಿಸಿ ಎಂದಿರಲ್ಲ... ಹಾಗೆ ಗೊತ್ತಾಯ್ತು.

★★★

ಪಿಸಿ 1: ಏನಯ್ಯಾ ಆ ಪಿಕ್‌ಪಾಕೆಟ್ ಕರಿಯಪ್ಪನಿಗೆ ಎಷ್ಟೊಂದು ಅಹಂಕಾರ?

ಪಿಸಿ 2: ಯಾಕೆ.. ಏನಾಯ್ತು?

ಪಿಸಿ 1: ಮಾಮೂಲಿ ಕೇಳಿದ್ರೆ, ನಿಮ್ ಬ್ಯಾಂಕ್ ಅಕೌಂಟ್ ನಂಬರ್ ಕೊಡಿ, ಮನಿ ಟ್ರಾನ್ಸ್‌ಫರ್ ಮಾಡ್ತೀನಿ ಅಂತಿದಾನೆ!

★★★

ಮೋಹನ್: ಡಾಕ್ಟ್ರೇ, ನನ್ನ ಹೆಂಡತಿ ರಾತ್ರಿ ನಿದ್ದೇನೇ ಮಾಡಲ್ಲ ಡಾಕ್ಟ್ರೇ!

ಡಾಕ್ಟರ್: ಎಷ್ಟು ದಿನಗಳಿಂದ ಹೀಗೆ ಆಗಿದೆ?

ಮೋಹನ್: ಅವಳ ತಂಗಿ ಊರಿಂದ ಬಂದ ದಿನದಿಂದ ಡಾಕ್ಟ್ರೆ!

★★★

ಇನ್ಸ್‌ಪೆಕ್ಟರ್: ನಿಮ್ಮ ಯಜಮಾನ್ರು ಕಾಣೆಯಾಗಿ ಎಷ್ಟು ದಿನಗಳಾದವು?

ಮೀರಾ: ಇಪ್ಪತ್ತು ದಿನಗಳಾದವು ಸಾರ್.

ಇನ್ಸ್‌ಪೆಕ್ಟರ್: ಮತ್ತೆ ಇವತ್ತು ಬಂದು ದೂರು ಕೊಡ್ತಿದೀರಲ್ಲ?

ಮೀರಾ: ಇವತ್ತು ಅವರ ಸಂಬಳದ ದಿನ ಅಲ್ವಾ ಸಾರ್..

★★★

ಸುರೇಶ: ಮಳೆ ಬಂದಿಲ್ಲ ಅಂತ ಹೊರಗೆ ಪ್ರತಿಭಟನೆ ಮಾಡ್ತಾ ಇದಾರಲ್ವಾ.. ಯಾರವ್ರು.. ರೈತರಾ?

ಮಹೇಶ: ಅಲ್ಲ ಸಾರ್. ಅವ್ರು ಕೊಡೆ ರಿಪೇರಿ ಮಾಡೋರು!

★★★

ಪತ್ರಕರ್ತರು: ಆ ದೆವ್ವದ ಸಿನಿಮಾವನ್ನು ರಾತ್ರಿ ಸಮಯದಲ್ಲಿ ಚಿತ್ರಮಂದಿರದಲ್ಲಿ ಒಬ್ಬರೇ ಕುಳಿತು ನೋಡಿ

ಬಹುಮಾನ ಗೆದ್ದಿದ್ದೀರಲ್ಲ ಸರ್, ಇದ್ಹೇಗೆ ಸಾಧ್ಯವಾಯಿತು?

ರಾಜೇಶ್: ನನ್ನ ಪ್ರತಿಯೊಂದು ಯಶಸ್ಸಿನ ಹಿಂದೆಯೂ ನನ್ನ ಹೆಂಡತಿ ಇದ್ದಾಳೆ!

**(ಸಂಗ್ರಹ) ಡಾ.ವಿ.ಪುಗಳೇದಿ, ಬಳ್ಳಾರಿ**

---



ಶಾಮು: ಪತ್ನಿ ಮತ್ತು ಪ್ರೇಯಸಿಯರ ನಡುವೆ ಏನು ವ್ಯತ್ಯಾಸ?

ರಾಮು: ಹೆಚ್ಚೇನಿಲ್ಲ, ಒಂದಿಪ್ಪತ್ತು ಕೆಜಿ ಅಷ್ಟೆ!

★★★

ಶಾಮು: ಅದ್ಯಾವುದೋ ಕೆಟ್ಟ ಗಳಿಗೆಯಲ್ಲಿ ನನ್ನ ಹೆಂಡತಿಗೆ, 'ನೀನು ಕೋಪಿಸಿಕೊಂಡಾಗ ತುಂಬ ಚಂದ ಕಾಣಿಸ್ತಿ' ಅಂದೆ..

ರಾಮು: ಸರಿಯಪ್ಪಾ, ಈಗೇನಾಯ್ತು?

ಶಾಮು: ಈಗೀಗ ಯಾರೇ ಮನೆಗೆ ಬಂದ್ರೂ ಅವರೆದುರು ಕೋಪಿಸ್ಕೋತಿದ್ದಾಳೆ!

★★★

ರಾಣಿ: ಅಮ್ಮಾ, ನಿನ್ನೆ ನನ್ನ ಕ್ಲಾಸ್‌ಮೇಟ್ ಪ್ರಣವ್ ನನ್ನನ್ನು ಅಪ್ಪಿಕೊಂಡು ಕೆನ್ನೆಗೆ ಮುತ್ತು ಕೊಟ್ಟ!

ಅಮ್ಮ: ಹೌದಾ... ನಡಿ, ಅವನ ಮನೆ ತೋರಿಸು, ನಾನು ಅವನನ್ನು ಕೇಳ್ತೀನಿ.

ರಾಣಿ: ಪ್ರಯೋಜನವಿಲ್ಲ ಅಮ್ಮಾ, ಅವನು ನಿನಗೆ ಕೊಡಲಿಕ್ಕಿಲ್ಲ!

**(ಸಂಗ್ರಹ) ಕೆ.ಆದಿತ್ಯ ಹೆಬ್ಬಾರ್**